ಬಂದ ನಂತರ ಇದನ್ನು ಪರಿಶೀಲಿಸಲಾಗುವುದು.

INCREASE IN QUOTA OF FOODGRAINS TO CARD HOLDERS

2(49)

SRI H.C.BALAKRISHNA (Magadi): Will the Hon'ble Minister for Food and Civil Supplies be pleased to state?

a) Whether it has come to the notice of Government that the Food and Civil Supplies System is not functioning properly;

b) Whether the Government is planning to enhance the quota of foodgrains to the card holders as the present quota is not sufficient;

c) What is the reason for reducing the quantity of kerosene to Urban and Rural ration card holders (to be furnished the scale of issue).

d) Has it come to the notice of Government due to reduction in the quantity of kerosene the urban people and rural farmers are affected adversely what action Government has taken to increase the quantity;

e) When will green card issued to the poor in the State?

Sri G.Basavannappa (Minister for Food & Civil Supplies):

a) No. However, whenever instances of irregular supply or any other lapses are reported prompt action is being taken.

b) As the Central Government have released addtionlal

allotment of foodgrains for December 97, January 98, Februray 98 and March 98 State Government is now issuing enhanced quota of foodgrains to the card holders.

c) The quantity of kerosene issued on urban cards and rural cards is not reduced. The quantity of kerosene saved on introduction of coupon system in urban areas has been diverted to rural cards. The quantity of kerosene currently being distributed in the Districts on urban cards is 8 to 10 litres, T.R.areas (10 to 12 litres and rural cards 4 to 5 litres.

d) As there is no reduction in the quantity of the kerosene issued, the question of adverse effect on urban cards and rural farmers does not arise. The quantity of kerosene saved on introductions of coupon system in urban areas has been diverted to rural card holders.

e) After the finalisation of door to door survey, action will be taken to issue green cards to poor people in the State.

ಶ್ರೀ ಹೆಚ್.ಸಿ.ಬಾಲಕೃಷ್ಣ: ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಆಹಾರದ ಪೂರೈಕೆಯ ವ್ಯವಸ್ಥೆಯ ಸರಿಯಾಗಿಲ್ಲವೆಂದು ಮಾನ್ಯ ಸಚಿವರು ಒಪ್ಪಿಕೊಂಡಿದ್ದಾರೆ. ಆದರೆ ಪಟ್ಟಣ ಪ್ರದೇಶ ಮತ್ತು ಗ್ರಾಮೀಣ ಪ್ರದೇಶದಲ್ಲಿ ಸೀಮೆಎಣ್ಣೆಯ ವಿತರಣೆಯ ಪ್ರಮಾಣವನ್ನು ಏಕೆ ಕಡಿಮೆ ಮಾಡಿದ್ದೀರಿ ಎಂದು ಪ್ರಶ್ನೆಯನ್ನು ಕೇಳಿರುವುದಕ್ಕೆ ಅವರು ಉತ್ತರದಲ್ಲಿ ಕಡಿಮೆ ಮಾಡಿಲ್ಲವೆಂದು ಹೇಳಿದ್ದಾರೆ. ಆದರೆ ಚುನಾವಣೆಯ ಸಮಯದಲ್ಲಿ ಇದರ ಬಗ್ಗೆ ಗಲಾಟೆಯನ್ನು ಮಾಡಿರುವುದು ಅವರ ಗಮನಕ್ಕೂ ಸಹ ಬಂದಿರಬಹುದು. ಆದುದರಿಂದ ದಯಮಾಡಿ ಸರಿಯಾದಂತಹ ಮಾಹಿತಿಯನ್ನು ಮಾನ್ಯ ಸಚಿವರು ತರಿಸಿಕೊಳ್ಳಬೇಕೆಂದು ಹೇಳಿ, ಪಟ್ಟಣ ಪ್ರದೇಶದಲ್ಲಿ ಎರಡು ಲೀಟರ್ ಸೀಮೆಎಣ್ಣೆಯನ್ನು ಕಡಿಮೆ ಮಾಡಿದ್ದಾರೆ. ಹಳ್ಳಿಗಳಲ್ಲಿ ಒಂದು ಲೀಟರ್ ಸೀಮೆಎಣ್ಣೆಯನ್ನು ಕಡಿಮೆ ಮಾಡಿದ್ದಾರೆ. ಇನ್ನೊಂದು ಪ್ರಶ್ನೆ ಏನೆಂದರೆ ರಾಜ್ಯದಲ್ಲಿ ಹಸಿರು ಪಡಿತರ ಚೀಟಿಯನ್ನು ಸಂಪೂರ್ಣವಾಗಿ ಯಾವಾಗ ವಿತರಣೆಯನ್ನು ಮಾಡುತ್ತೀರಿ ಎಂದು ಕೇಳಿರುವುದಕ್ಕೆ ಇನ್ನು ಮನೆ ಮನೆಗಳಿಗೆ ಹೋಗಿ ಸಮೀಕ್ಷೆಯನ್ನು ಮಾಡಿ ವಿತರಣೆಯನ್ನು ಮಾಡುತ್ತೇವೆಂದು ಉತ್ತರದಲ್ಲಿ ಹೇಳಿದ್ದಾರೆ. ಇನ್ನು ಎಷ್ಟು ದಿವಸಗಳಲ್ಲಿ ವಿತರಣೆಯನ್ನು ಮಾಡುತ್ತೀರಿ?

ಏಕೆಂದರೆ ಕಳೆದ ಸಾರಿ ಪ್ರಶ್ನೆಯನ್ನು ಹಾಕಿದಾಗಲೂ ಕೂಡ ಇದೆ ಉತ್ತರವನ್ನು ಕೊಟ್ಟಿದ್ದರು.

ಶ್ರೀ ಜಿ.ಬಸವಣ್ಣಪ್ಪ: ಸನ್ಮಾನ್ಯ ಅಧ್ಯಕ್ಷರೇ, ಕೇಂದ್ರ ಸರ್ಕಾರ ಹೊಸ ಪಡಿತರ ಪದ್ಧತಿಯನ್ನು 1.6.1997ರಿಂದ ಜಾರಿಗೆ ತಂದಿದ್ದರಿಂದ ಪಡಿತರ ಪದ್ಧತಿಯಲ್ಲಿ ಸ್ವಲ್ಪ ಬದಲಾವಣೆಯಾಯಿತು. ಒಂದು ಲಕ್ಷ ಐವತ್ತು ಸಾವಿರ ಮೆಟ್ರಿಕ್ ಟನ್ ಆಹಾರವನ್ನು ಕೇಂದ್ರ ಸರ್ಕಾರ ರಾಜ್ಯಕ್ಕೆ ಕೊಡುತ್ತಿದ್ದನ್ನು ಕೇವಲ 75,000 ಟನ್‌ಗೆ ಇಳಿಸಿತು. ರಾಜ್ಯ ಸರ್ಕಾರ ಸತತ ಪ್ರಯತ್ನವನ್ನು ಮಾಡಿ ಈಗ ಹೆಚ್ಚಿಗೆ ಮಾಡಿಸಲಾಯಿತು. ಕಳೆದ ಎರಡು ತಿಂಗಳಿಂದ ವಿತರಣ ವ್ಯವಸ್ಥೆಯು ಏನಿದೆ ಅದನ್ನು ಸರಿಪಡಿಸಲಾಗಿದೆ. ಸೀಮೆಎಣ್ಣೆಯ ವಿಚಾರದಲ್ಲಿ ಮೊದಲು ಮೂರು ಲೀಟರ್ ವಿತರಣೆ ಮಾಡುತ್ತಿದ್ದನ್ನು ನಾಲ್ಕು ಲೀಟರ್ ವಿತರಣೆ ಮಾಡಬೇಕು ಎನ್ನುವ ಕಾರಣದಿಂದ ಸಮತೋಲನ ಮಾಡಲು ನಗರ ಮತ್ತು ಪಟ್ಟಣದಲ್ಲಿ ವಿತರಣೆ ಮಾಡುವುದನ್ನು ಕಡಿಮೆ ಮಾಡಬೇಕೆಂದು ನಿಲುವನ್ನು ತೆಗೆದುಕೊಂಡು ಅದಾದ ಮೇಲೆ ಶಾಸಕರ ಮತ್ತು ಕೆಲವರ ಸಲಹೆಯನ್ನು ತೆಗೆದುಕೊಂಡು ಸ್ಟೇಟಸ್‌ಕೋಪನ್ನು ಮೈನ್‌ಟೈನ್ ಮಾಡಿದ್ದೇವೆ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಇನ್ನು ಎಷ್ಟು ದಿವಸಗಳಲ್ಲಿ ಸಂಪೂರ್ಣವಾಗಿ ಹಸಿರು ಕಾರ್ಡ್‌ನ್ನು ವಿತರಣೆ ಮಾಡುತ್ತೀರಿ?

ಶ್ರೀ ಜಿ.ಬಸವಣ್ಣಪ್ಪ: ಮಾನ್ಯ ಅಧ್ಯಕ್ಷರೇ, ಹಸಿರು ಕಾರ್ಡ್‌ನ್ನು ವಿತರಣೆ ಮಾಡುವ ಕಾರ್ಯಕ್ರಮವನ್ನು 1995ರಲ್ಲಿ ಜಾರಿಗೆ ತಂದಾಗ ಕ್ರಮಬದ್ಧವಾಗಿ ಮನೆ ಮನೆಗಳಿಗೆ ಹೋಗಿ ಸರ್ವೆಯನ್ನು ಮಾಡದೇ ಕೊಡದೇ ಇರುವುದು ತುಂಬಾ ತೊಂದರೆಯಾಗಿದೆ. ಅದಕ್ಕಾಗಿ 6 ಲಕ್ಷ ಬಡ ಕುಟುಂಬಗಳಿವೆಯೆಂದು ಅಂದಾಜು ಮಾಡಲಾಗಿದೆ. ಲೋಕ ಸಭೆಯ ಚುನಾವಣೆಯು ಬಂದಿದ್ದರಿಂದ ಸರ್ವೆಯನ್ನು ಮಾಡಿ ಹಸಿರು ಕಾರ್ಡ್‌ನ್ನು ವಿತರಣೆ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ತಕ್ಷಣವೇ ಈಗ ಬಡ ಕುಟುಂಬಗಳನ್ನು ಗುರುತಿಸಿ 6 ಲಕ್ಷ ಹಸಿರು ಕಾರ್ಡ್‌ನ್ನು ಕೊಡುತ್ತೇವೆ.

ಶ್ರೀ ಹೆಚ್.ಸಿ.ಬಾಲಕೃಷ್ಣ: ದಯಮಾಡಿ ಕಳೆದ ಸಾಲಿನಲ್ಲಿಯೂ ಕೂಡ ಇದೇ ಸದನದಲ್ಲಿ ಇದೇ ಆಶ್ವಾಸನೆಯನ್ನು ಕೊಟ್ಟಿದ್ದರಿಂದ ದಯಮಾಡಿ ಸಮಯವನ್ನು ನಿಗದಿ ಮಾಡಬೇಕು. ಎಷ್ಟು ದಿವಸಗಳಲ್ಲಿ ಕೊಡುತ್ತೀರಿ?

ಶ್ರೀ ಜಿ.ಬಸವಣ್ಣಪ್ಪ: ಮಾನ್ಯ ಅಧ್ಯಕ್ಷರೇ, ಈಗಾಗಲೇ ಇದರ ಬಗ್ಗೆ ಸಚಿವ ಸಂಪುಟವು ತೀರ್ಮಾನವನ್ನು ತೆಗೆದುಕೊಂಡಿದೆ. ಲೋಕಸಭಾ ಚುನಾವಣೆಯು ಈ ಮಧ್ಯೆ ಬಂದಿದ್ದರಿಂದ ಸಾಧ್ಯವಾಗಲಿಲ್ಲ. ಇನ್ನು ಎರಡು ತಿಂಗಳುಗಳಲ್ಲಿ ಸರ್ವೆಯನ್ನು ಮಾಡಿ ಹಸಿರು ಕಾರ್ಡ್‌ನ್ನು ವಿತರಣೆ ಮಾಡುತ್ತೇವೆ.

ಶ್ರೀ ಎ.ರಾಮದಾಸ್: ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಕೊಡುವಂತಹ ಸಂದರ್ಭದಲ್ಲಿ ಮಾನ್ಯ ಸಚಿವರು ಸೆಂಟ್ರಲ್ ಗೌರ್ನಮೆಂಟ್‌ನಿಂದ ಡಿಸೆಂಬರ್, ಜನವರಿ, ಫೆಬ್ರವರಿ, ಮಾರ್ಚ್ ತಿಂಗಳಿಗೆ ಅಡಿಷನಲ್ ಕೋಟವನ್ನು ಕೊಟ್ಟಿದ್ದಾರೆಂದು ಹೇಳಿದ್ದಾರೆ. ಆದರೆ ಜನವರಿ ಮತ್ತು ಫೆಬ್ರವರಿ ತಿಂಗಳಿನಲ್ಲಿಯೂ ಸಹ ನಗರ ಪ್ರದೇಶದಲ್ಲಿಯೂ ಕೂಡ ಆಹಾರ ಪದಾರ್ಥಗಳನ್ನು ಕೊಡುವುದಕ್ಕೆ ಆಗದೇ, ಇವತ್ತಿಗೂ ಕೊಡದೇ ಇರತಕ್ಕಂತಹ ಸಂದರ್ಭ ಮೈಸೂರಿನಲ್ಲಿಯೂ ಕೂಡ ಇದೆ. ಜೊತೆಗೆ ಮಾನ್ಯ ಸಚಿವರು ಸೀಮೆಎಣ್ಣೆಯ ಕೋಟವನ್ನು ಕಡಿಮೆ ಮಾಡಿಲ್ಲವೆಂದು ಹೇಳಿದ್ದಾರೆ. ಮೈಸೂರಿನ ಜಿಲ್ಲಾಧಿಕಾರಿಗಳು ಮೂರು ಲೀಟರ್ ಕಡಿಮೆ ಮಾಡಿರುವುದರ ಬಗ್ಗೆ ಒಂದು ಗಲಾಟೆಯಾಯಿತು. ಮೂರು ಲೀಟರ್ ಕಡಿಮೆಯಾಗಿರುವುದು ಎಲ್ಲಾ ಕಡೆಯೂ ಇದೆ. ಆದರೆ ಎಲ್ಲಿಯೂ ಕಡಿಮೆ ಮಾಡಿಲ್ಲವೆಂದು ಉತ್ತರದಲ್ಲಿ ಹೇಳಿದ್ದೀರಿ. ಸೆಂಟ್ರಲ್ ಗೌರ್ನಮೆಂಟ್ ಕೋಟಾ ಜಾಸ್ತಿ ಇದ್ದರೂ ಕೂಡ ನಮ್ಮ ರಾಜ್ಯದಲ್ಲಿ ಕಡಿಮೆ ಮಾಡಿರುವುದು ಏಕೆ ಎಂಬುದನ್ನು ತಿಳಿಸಬೇಕು.

ಶ್ರೀ ಜಿ.ಬಸವಣ್ಣಪ್ಪ: ರಾಜ್ಯ ಸರ್ಕಾರದ ಪ್ರಯತ್ನದಿಂದ 15 ಸಾವಿರ ಮೆಟ್ರಿಕ್ ಟನ್ ಅಕ್ಕಿಯನ್ನು ಡಿಸೆಂಬರ್ 1997ರಲ್ಲಿ ಕೊಟ್ಟರು, 5 ಸಾವಿರ ಮೆಟ್ರಿಕ್ ಟನ್ ಗೋಧಿಯನ್ನು ಡಿಸೆಂಬರ್ 1997ರಲ್ಲಿ ಕೊಟ್ಟರು; 10 ಸಾವಿರ ಮೆಟ್ರಿಕ್ ಟನ್ ಗೋಧಿಯನ್ನು ಜನವರಿ 1998ರಲ್ಲಿ ಕೊಟ್ಟಿದ್ದಾರೆ. ಆದುದರಿಂದ ಪಡಿತರ ಕೋಟಾ ಏನು ಕಡಿಮೆ ಆಗಿತ್ತು ಪಟ್ಟಣ ಪ್ರದೇಶಗಳಲ್ಲಿ ಅದನ್ನು ರೆಸ್ಟೋರ್ ಮಾಡುವುದಕ್ಕೆ ಈಗಾಗಲೇ ಆದೇಶ ಕೊಟ್ಟಿದ್ದೇವೆ. ಜನವರಿಯಿಂದ ಅದು ರೆಸ್ಟೋರ್ ಆಗಿದೆ. ಸೀಮೆ ಎಣ್ಣೆ ಬಗ್ಗೆ ಕಡಿಮೆ ಮಾಡಬೇಕೆಂದು ಮೊದಲು ನಿಲುವು ತೆಗೆದುಕೊಂಡಿದ್ದವು. ತಮ್ಮೆಲ್ಲರ ಪ್ರಯತ್ನದಿಂದ ಮತ್ತೆ ಅದನ್ನು ರೆಸ್ಟೋರೇಷನ್ ಮಾಡಿದ್ದೇವೆ. ಅಂದರೆ ಮೊದಲು ಎಷ್ಟು ಕೊಡುತ್ತಿದ್ದೆವು ಅಷ್ಟೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ನನಗೆ ಒಂದು ಉತ್ತರ ಕೊಡಿಸಿದರೆ ಸಾಕು. ಮಾನ್ಯ ಸಚಿವರು ಹಿರಿಯರಿದ್ದೀರಿ, ಅನುಭವ ಇದೆ. ಸರ್ವೆ ಕೆಲಸವನ್ನು ಮಾಡದಿದ್ದರೆ ಅದು ಪೂರ್ಣಗೊಳ್ಳದಿದ್ದರೆ 6 ಲಕ್ಷ ಕಡುಬಡವರಿಗೆ, ಅರ್ಹರಿಗೆ ಹಸಿರು ಕಾರ್ಡ್ ಕೊಡುವುದಕ್ಕಾಗಿಲ್ಲವೆಂದು ಹೇಳುವುದಕ್ಕೆ ಆಗುತ್ತಿರಲಿಲ್ಲ. ಅಂದರೆ ಸರ್ವೆ ಕಾರ್ಯ ಮುಗಿದಿದೆ. ಕಳೆದ ಒಂದೂವರೆ ವರ್ಷದಿಂದ ಈ ಸದನದಲ್ಲಿ ಯಾವುದೇ ಸಂದರ್ಭದಲ್ಲಿ ಹಸಿರು ಕಾರ್ಡ್ ಸಿಗದಿರುವವರಿಗೆ ಕೊಟ್ಟಿದ್ದೀರಾ ಎಂದರೆ ಸರ್ವೆ ಸರ್ವೆ ಎಂದು ಹೇಳುತ್ತಿದ್ದೀರಿ; ಅದು ಯಾವ ರೀತಿ ಸರ್ವೆ ಎಂದು ಗೊತ್ತಿಲ್ಲ, ಸರ್ವೆ ಕೆಲಸ ಮುಗಿದಿದೆಯಲ್ಲಾ. ಇಲ್ಲಿ ಎರಡು ಸಂಗತಿಗಳು. ಒಂದು ನಿಮ್ಮ ಅಧಿಕಾರಿಗಳು ಸರಿಯಾಗಿ ಸರ್ವೆ ಮಾಡದೆ ಅರ್ಹರಾದ ಕಡುಬಡುವರಿಗೆ ಗ್ರೀನ್ ಕಾರ್ಡ್ ಸಿಕ್ಕಲಿಲ್ಲ. ಅವನಿಗೆ ಯಾವುದೇ ಪಡಿತರ ವ್ಯವಸ್ಥೆ ಇಲ್ಲದೆ ಅವನು ಬೀದಿ ಪಾಲಾದ. ಎರಡನೆಯದು, ಸರ್ವೆ ಕೆಲಸ ಮುಗಿದ ಮೇಲಾದರೂ ಕೊಡಬಹುದಿತ್ತಲ್ಲಾ?

ಉದಾಹರಣೆಗೆ ಶಿವಮೊಗ್ಗ ಜಿಲ್ಲೆ ತೆಗೆದುಕೊಂಡರೆ ಅಲ್ಲಿ ಯಾವುದೋ ತಾಲ್ಲೂಕಿನಲ್ಲಿ ಸರ್ವೆ ಆಯಿತು. ಆದರೆ ಅಲ್ಲಿ ಗ್ರೀನ್ ಕಾರ್ಡ್ ಸಿಕ್ಕಿಲ್ಲ. ಸರ್ವೆ ಆದತಕ್ಷಣ ನೀವು ಜೊತೆಜೊತೆಗೆ ಕಾರ್ಡ್ ವಿತರಣೆ ಕೆಲಸವನ್ನು ಮಾಡಬೇಕಾಗಿತ್ತು. ಆಡಳಿತದಲ್ಲಿ 3 ವರ್ಷಗಳ ಕಾಲ ಬರೀ ಸರ್ವೆ ಮಾಡುತ್ತಾ ಬಂದು 6 ಲಕ್ಷ ಕುಟುಂಬಗಳು ಇವತ್ತು ಬೀದಿ ಪಾಲಾಗಿದ್ದಾರೆ. ಈ ಸದನ ಮುಗಿಯುವುದರೊಳಗೆ ಅಂದರೆ ನೀವು 30ನೇ ತಾರೀಖು ಬಜೆಟ್ ಪಾಸ್ ಮಾಡಿಕೊಂಡು ಹೋಗುವುದರೊಳಗೆ 6 ಲಕ್ಷ ಕುಟುಂಬಗಳಿಗೆ ಹಸಿರು ಕಾರ್ಡ್ ವಿತರಣೆ ಮಾಡುವ ಆಜ್ಞೆಯನ್ನು ಸರ್ಕಾರ ಮಾಡುತ್ತದೋ ಇಲ್ಲವೋ ಅಥವಾ 6 ಲಕ್ಷ ಕುಟುಂಬಗಳು ಬಂದು ವಿಧಾನಸೌಧದ ಮುಂದೆ ಕುಳಿತಾಗ ಮಾನ್ಯ ಮುಖ್ಯ ಮಂತ್ರಿಗಳಿಗೆ ಸಮಾಧಾನವಾಗುತ್ತದೆಯೆ? ಏತಕ್ಕೆ ಈ ರೀತಿ ಇಲಾಖೆಯನ್ನು ನಡೆಸುತ್ತಿದ್ದೀರಿ? ಇದೊಂದು ಬೇಜವಾಬ್ದಾರಿತನದ ಪರಮಾವಧಿಯಲ್ಲವೆ? ಆ ಬಡವರು ಏನು ಅಪರಾದ ಮಾಡಿದ್ದಾರೆ ಸ್ವಾಮಿ?

ಅಧ್ಯಕ್ಷರು: ಅವರು ನಿಮ್ಮ ಜಿಲ್ಲೆಯವರು, ನೀವು ಅವರಿಗೆ ಅಷ್ಟು ಗಟ್ಟಿಯಾಗಿ ಹೇಳಿದರೆ ಹೇಗೆ?

ಶ್ರೀ ಬಿ.ಎಸ್.ಯಡಿಯೂರಪ್ಪ: ನಾನು ನಿಮ್ಮನ್ನು ಕೇಳುತ್ತೇನೆ; ಯಾವುದೇ ಒಂದು ತಾಲ್ಲೂಕಿನಲ್ಲಿ ಸರ್ವೆ ಆಯಿತೇ? ಅರ್ಹರು ಇಲ್ಲದವರಿಂದ ಕಾರ್ಡುಗಳನ್ನು ಕಿತ್ತುಕೊಂಡರೆ ಅರ್ಹರು ಇದ್ದವರಿಗೆ ಕೊಡಬೇಕಿತ್ತಲ್ಲವೆ?

ಅಧ್ಯಕ್ಷರು: ಸರ್ವೆ ಅಂದರೆ ಏನು ಸಣ್ಣ ವಿಚಾರವೇ? ಅದು ನಿರಂತರವಾಗಿ ನಡೆಯುವ ಕೆಲಸ. ಸರ್ವೆ ಅಂದರೆ ಸರ್ವೆಯೇ ಅದು.

ಶ್ರೀ ಕೆ.ಎಸ್.ಸುರೇಶ್ ಕುಮಾರ್: ಅದಕ್ಕೆ ಸರ್ವೇ ಜನ ಸುಖಿನೋ ಭವಂತು ಅನ್ನುವುದು. ಸರ್ವೆ ಮಾಡುವ ಜನರೇ ಸುಖವಾಗಿರುವುದು?

ಶ್ರೀ ಬಿ.ಎಸ್.ಯಡಿಯೂರಪ್ಪ: ತಾವು ಇದನ್ನು ಸೀರಿಯಸ್ ಆಗಿ ತೆಗೆದುಕೊಂಡು ಮಾಡುತ್ತೀರಿ ಅಂದುಕೊಂಡಿದ್ದೇನೆ.

ಶ್ರೀ ಜಿ.ಬಸವಣ್ಣಪ್ಪ: ನಾನು ಆಹಾರ ಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಾಗ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಅವ್ಯವಹಾರದ, ಭ್ರಷ್ಟಾಚಾರದ ಒಂದು ಆಗರವಾಗಿತ್ತು. ಇದನ್ನು ಹೇಗೆ ಸರಿಪಡಿಸಬೇಕೆಂಬುದೇ ನನಗೆ ಒಂದು ದೊಡ್ಡ ಸಮಸ್ಯೆಯಾಯಿತು.

ಶ್ರೀ ಬಿ.ಎಸ್.ಯಡಿಯೂರಪ್ಪ: ನೀವು ಅದನ್ನು ಸರಿಪಡಿಸುವುದರಲ್ಲಿ ನಿಮ್ಮ ಅವಧಿ ಮುಗಿದುಹೋಗುತ್ತಿದೆ.

(ಗೊಂದಲ)

ಮಾನ್ಯ ಸದಸ್ಯರು: ಈಗ ನಿಮ್ಮ ಇಲಾಖೆ ಭ್ರಷ್ಟಾಚಾರದಿಂದ ಮುಕ್ತವಾಗಿದೆಯೆ?

ಶ್ರೀ ಜಿ.ಬಸವಣ್ಣೆಪ್ಪ: ಸುಮಾರು 15 ಲಕ್ಷ ನಕಲಿ ಕಾರ್ಡುಗಳು ಇದ್ದವು. ಹಾಗಾಗಿ ಸೀಮೆ ಎಣ್ಣೆ ಮತ್ತು ಅಗತ್ಯ ವಸ್ತುಗಳು ಮುಕ್ತ ಮಾರುಕಟ್ಟೆಯಲ್ಲಿ ಮಾರಾಟವಾಗುತ್ತಿದ್ದವು. ಅದಕ್ಕೋಸ್ಕರ ಕೂಪನ್ ಸಿಸ್ಟಂ ಇಂಟ್ರಡ್ಯೂಸ್ ಮಾಡಿ ಸ್ಪೆಷಲ್ ಡ್ರೈವ್ ಮಾಡಿ 11 ಲಕ್ಷ ಬೋಗಸ್ ಕಾರ್ಡುಗಳನ್ನು ತೆಗೆದುಹಾಕಿ, ಆ ಕೂಪನ್ ಮೂಲಕ ಸೀಮೆ ಎಣ್ಣೆ ಮುಕ್ತ ಮಾರುಕಟ್ಟೆಯಲ್ಲಿ ಮಾರಾಟವಾಗುವುದನ್ನು ತಡೆಗಟ್ಟಿದೆವು.

ಶ್ರೀ ಬಿ.ಎಸ್.ಯಡಿಯೂರಪ್ಪ: ನಾನು ನಿಮಗೆ ನೇರವಾಗಿ ಪ್ರಶ್ನೆ ಕೇಳುತ್ತೇನೆ, ನಿಮಗೆ ಹಸಿರು ಕಾರ್ಡುಗಳನ್ನು ವಿತರಣೆ ಮಾಡುವುದಕ್ಕೆ ತೊಂದರೆ ಏನಿದೆ? ಐಡೆಂಟಿಫೈ ಮಾಡಿ ಮುಗಿದ ಮೇಲೆ 6 ಲಕ್ಷ ಕುಟುಂಬದವರು ಏನು ಮಾಡಬೇಕು?

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಅವರ ಕಾರ್ಡುಗಳು ಹರಿದು ಹೋಗಿವೆ, ಕಳೆದು ಹೋಗಿವೆ, ಅವರ ಹತ್ತಿರ ಹಸಿರು ಕಾರ್ಡುಗಳು ಇಲ್ಲವಂತೆ. ನೀವು ಸರ್ವೆ ಮಾಡಿದವರಿಗೂ ಕೊಟ್ಟಿಲ್ಲ. ಕಾರ್ಡ್ ಪ್ರಿಂಟ್ ಮಾಡುವುದಕ್ಕೆ ಒಂದು ವರ್ಷ ತೆಗೆದುಕೊಳ್ಳುತ್ತಿದ್ದೀರಿ. ಹಾಗಾಗಿ ಸರ್ವೆ ಮಾಡಿದವರಿಗೆ ಕೂಡ ಕಾರ್ಡ ಕೊಡುವುದಕ್ಕಾಗಿಲ್ಲ, ಕಾರ್ಡ್ ಪ್ರಿಂಟ್ ಮಾಡಿಲ್ಲ.

ಶ್ರೀ ಜಿ.ಬಸವಣ್ಣಪ್ಪ: ಈ ಪಡಿತರ ವ್ಯವಸ್ಥೆಯನ್ನು ಸೆಟ್‌ರೈಟ್ ಮಾಡದೆ ಮುಂದುವರಿಯುವುದಕ್ಕೆ ಸಾಧ್ಯವಿರಲಿಲ್ಲ.

ಶ್ರೀ ವಾಟಾಳ್ ನಾಗರಾಜ್: ಈ ಪಡಿತರ ವ್ಯವಸ್ಥೆಯನ್ನು ಈ ಜನ್ಮದಲ್ಲಿ ಇವರ ಕೈಯಲ್ಲಿ ಸರಿಪಡಿಸುವುದಕ್ಕೆ ಆಗುವುದಿಲ್ಲ; ಇದು ಸ್ಪಷ್ಟ. ಈ ಸದನದಲ್ಲಿ ಅನೇಕ ಬಾರಿ ಹೇಳಿದ್ದಾರೆ: ನಾನು ಸಮೀಕ್ಷೆ ಮಾಡುತ್ತೇನೆ, ಅನುಕೂಲ ಮಾಡುತ್ತೇನೆಂದು ಹೇಳಿದ್ದಾರೆ. ಆದರೆ ಈ ಜನ್ಮದಲ್ಲಿ ಈ ಆಹಾರ ಮಂತ್ರಿಗಳಿಗೆ ಇದನ್ನು ಸರಿಪಡಿಸುವುದಕ್ಕೆ ಆಗುವುದಿಲ್ಲ.

ಶ್ರೀ ಹೆಚ್.ಎನ್.ನಂಜೇಗೌಡ: ಮಾನ್ಯ ವಾಟಾಳರು ಯಾರ ಜನ್ಮದಲ್ಲಿ ಎಂದು ಹೇಳಲಿಲ್ಲ. ಸುಮ್ಮನೆ ಜನ್ಮದಲ್ಲಿ ಅಂದರು.

ಶ್ರೀ ಜಿ.ಬಸವಣ್ಣೆಪ್ಪ: ನಾನು ನನ್ನ ಅನುಭವದಿಂದ ಮಾಡಿದ್ದೇನೆ; ಪ್ರಾಮಾಣಿಕವಾಗಿ ಮಾಡಿದ್ದೇನೆ. ಡಿಸ್ಟ್ರಿಬ್ಯೂಷನ್ ಸಿಸ್ಟಂ ಅನ್ನು ಸ್ಟ್ರೀಂಲೈನ್ ಮಾಡಿದ್ದೇನೆ. ಆರು ಲಕ್ಷ ಅರ್ಹ ಕುಟುಂಬಗಳೇನಿವೆ, ಅವುಗಳನ್ನು ಸರ್ವೆ ಮಾಡಿ ಮೇ ತಿಂಗಳಲ್ಲಿ ಹಸಿರು ಕಾರ್ಡ್ ಕೊಡತಕ್ಕ ವ್ಯವಸ್ಥೆ ಮಾಡುತ್ತೇನೆಂದು ಆಶ್ವಾಸನೆ ಕೊಡುತ್ತೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಹರಿದದ್ದು ಕಳೆದದ್ದು ಏನಿದೆ, ಅವರುಗಳಿಗೆ ಪ್ರತ್ಯೇಕವಾಗಿ

ಕೊಡುವುದಿಲ್ಲವೆ?

ಶ್ರೀ ಬಿ.ಎಸ್.ಯಡಿಯೂರಪ್ಪ: ನೀವು ಏನು ಸರ್ವೆ ಮಾಡುತ್ತೀರಿ? ಕಳೆದ ಅಧಿವೇಶನದಲ್ಲಿ ಇದೇ ರೀತಿ ಉತ್ತರ ಕೊಟ್ಟಿದ್ದಾರೆ....

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಸಮೀಕ್ಷೆ ಯಾವಾಗ ಆರಂಭವಾಯಿತು? ಸಮೀಕ್ಷೆಯನ್ನು ಯಾವಾಗ ಮುಗಿಸಿದರು? ಈ ರೀತಿಯಾದ ಪೊಳ್ಳು ಉತ್ತರದಿಂದ ಈ ಸಮಸ್ಯೆ ಬಗೆಹರಿಯುವುದಿಲ್ಲ; ಪೊಳ್ಳುಭರವಸೆಯಿಂದ ಸಮಸ್ಯೆ ಬಗೆಹರಿಯುವುದಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: ಆರು ಲಕ್ಷ ಕುಟುಂಬಗಳನ್ನು ಐಡೆಂಟಿಫೈ ಮಾಡಿದ್ದಾರೆ. ಅವರಿಗೆ ಯಾವಾಗ ಕಾರ್ಡ್‌ಗಳನ್ನು ಕೊಡುತ್ತಾರೆಂದು ಕೇಳುತ್ತಿದ್ದೇನೆ.

ಅಧ್ಯಕ್ಷರು: ಅವರು ಉತ್ತರ ಹೇಳುತ್ತಾರೆ. ನೀವು ಅವರಿಗೆ ಗಾಬರಿಪಡಿಸಬೇಡಿ. ಅವರದ್ದು ಸ್ವಲ್ಪ ಮೃದು ಸ್ವಭಾವ.

ಶ್ರೀ ಜೆ.ಹೆಚ್.ಪಟೇಲ್: ನಾವು ಕೊಡುತ್ತೇವೆ. ಐಡೆಂಟಿಫೈ ಆಗಿದ್ದು ನಿಜ. ಐಡೆಂಟಿಫೈ ಮಾಡುವುದು ಏತಕ್ಕೋಸ್ಕರ? ಇವರು ಪ್ರಶ್ನೆ ಕೇಳಲಿ ಎಂದು ಅಲ್ಲ. ಅವರಿಗೆ ಕಾರ್ಡ್ ಕೊಡುವುದಕ್ಕೋಸ್ಕರ ಐಡೆಂಟಿಫೈ ಮಾಡುವುದು. ಆ ಪ್ರಕಾರ ಮಾಡಿದ್ದೇವೆ, ಕಾರ್ಡ್ ಕೊಡುತ್ತೇವೆ.

ಮಾನ್ಯ ಸದಸ್ಯರು: ಯಾವಾಗ ಕೊಡುತ್ತೀರಿ?

ಶ್ರೀ ಜೆ.ಹೆಚ್.ಪಟೇಲ್: ಚುನಾವಣೆ ಇತ್ತು, ಹಾಗಾಗಿ ಕೊಡುವುದಕ್ಕೆ ಆಗಿರಲಿಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಐಡೆಂಟಿಫೈ ಆಗಿ ಎರಡು ವರ್ಷವಾದರೂ ಕಾರ್ಡ್ ಕೊಟ್ಟಿಲ್ಲ.

ಅಧ್ಯಕ್ಷರು: ಐಡೆಂಟಿಫೈ ಮಾಡುವ ವೇಳೆಗೆ ಚುನಾವಣೆ ಬಂತು.

ಶ್ರೀ ವಾಟಾಳ್ ನಾಗರಾಜ್: ಸಮೀಕ್ಷೆ ಆರಂಭವಾಗಿ ಈಗಾಗಲೇ ಎರಡು ವರ್ಷವಾಗಿದೆ. ಮುಂದಿನ ಚುನಾವಣೆಯವರೆಗೆ ಸಮೀಕ್ಷೆ ಮಾಡುತ್ತೀರಾ?

ಶ್ರೀ ಬಿ.ಎಸ್.ಯಡಿಯೂರಪ್ಪ: 6 ಲಕ್ಷ ಜನರಿಗೆ ಇವರೇ ಐಡೆಂಟಿಫೈ ಮಾಡಿದವರಿಗೆ ಕಾರ್ಡ್ ಸಿಕ್ಕಿಲ್ಲ. ಅವರನ್ನು ತಂದು ವಿಧಾನಸೌಧದ ಮುಂದೆ ಕೂರಿಸಿದಾಗ ಇಲ್ಲೇ ನೀವು ಕಾರ್ಡ್ ವಿತರಣೆ ಮಾಡಿ. ಮುಖ್ಯ ಮಂತ್ರಿಗಳಿಗೆ ಒಳ್ಳೆಯ ಹೆಸರು ಬರಲಿ. ನಿಮ್ಮ ಮುಂದೆ ತಂದು ನಿಲ್ಲಿಸುತ್ತೇವೆ, ಇಲ್ಲೇ ಬೆಂಗಳೂರಿನಲ್ಲೇ ವಿತರಣೆ ಮಾಡಿ. ನಾವು ಅದಕ್ಕೆ

3-4 ದಿನಗಳಲ್ಲಿ ವ್ಯವಸ್ಥೆ ಮಾಡುತ್ತೇವೆ. ಮಾಡಬಹುದೇ ಸ್ವಾಮಿ? ನೀವು ಏನು ಐಡೆಂಟಿಫೈ ಮಾಡಿದ್ದೀರಿ, ಅವರಿಗೆ ಕಾರ್ಡ್ ವಿತರಣೆ ಮಾಡುವ ಕೆಲಸವನ್ನು ಮುಖ್ಯ ಮಂತ್ರಿಗಳೇ ಮಾಡಿ. ನೀವೇನು ಅವರನ್ನು ಹುಡುಕಿಕೊಂಡು ಹೋಗಬೇಡಿ, ನಾವೇ ಅವರನ್ನು ಇಲ್ಲಿಗೆ ಕರೆದುಕೊಂಡು ಬರುತ್ತೇವೆ. ನಿಮ್ಮ ಮನೆ ಮುಂದೆ ಕ್ಯೂ ನಿಲ್ಲಿಸುತ್ತೇವೆ. ನೀವೇ ನಿಮ್ಮ ಕೈಯಿಂದ ವಿತರಣೆ ಮಾಡಿ.

ಶ್ರೀ ಜೆ.ಹೆಚ್.ಪಟೇಲ್: ಅವರು 6 ಲಕ್ಷ ಜನರ ಜೊತೆಗೆ ನೀವು ಕುಳಿತು ಕೊಳ್ಳಿ, ನಾನು ಕುಳಿತುಕೊಳ್ಳುತ್ತೇನೆ. ನಿಮಗೆ ಕೆಲಸ ಆಗಬೇಕೇ ಬೇಡವೆ?

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಕಳೆದು ಹೋಗಿರುವ, ಹರಿದು ಹೋಗಿರುವ ಕಾರ್ಡುಗಳನ್ನು ಬದಲಾಯಿಸಿ ಕೊಡುವ ವ್ಯವಸ್ಥೆಯಾದರೂ ಪ್ರತ್ಯೇಕವಾಗಿ ಆಗಲಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ನೀವು ಕೆಲಸ ಮಾಡಿಲ್ಲ.

ಶ್ರೀ ಜೆ.ಹೆಚ್.ಪಟೇಲ್: ನಾವು ಐಡೆಂಟಿಫೈ ಮಾಡಿದ್ದೇವೆ. ಚುನಾವಣೆ ಕಾರಣಕ್ಕೆ ಅಥವಾ ಬೇರೆ ಕಾರಣಕ್ಕೆ ಅವರಿಗೆ ಕಾರ್ಡ್ ವಿತರಣೆ ಮಾಡಲು ಆಗಿಲ್ಲ. ಐಡೆಂಟಿಫೈ ಮಾಡಿಸಿದ್ದೇ ಅದಕ್ಕೋಸ್ಕರ, ಸರ್ವೆ ಮಾಡಿಸಿದ್ದೇ ಅದಕ್ಕೋಸ್ಕರ. ಬಡವರಿಗೆ ತೊಂದರೆಯಾಗುತ್ತದೆಂಬುದನ್ನು ಗಮನದಲ್ಲಿಟ್ಟುಕೊಂಡು ಕಾರ್ಡ್ ಕೊಡುತ್ತೇವೆಂದು ಹೇಳಿದ ಮೇಲೂ ಮತ್ತೆ ಅವರನ್ನು ಇಲ್ಲಿಗೆ ಕರೆದುಕೊಂಡು ಬರುತ್ತೇನೆಂದು ಹೇಳುತ್ತಿರಲ್ಲಾ?

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಮುಖ್ಯ ಮಂತ್ರಿಗಳೇ, ಸಮೀಕ್ಷೆಯಾಗಿ ಎಷ್ಟು ವರ್ಷವಾಯಿತು? ಸಮೀಕ್ಷೆಯಾಗಿ ಎರಡು ವರ್ಷವಾಗಿದೆ. ನಾನು ತಮ್ಮ ಗಮನಕ್ಕೆ ಎಷ್ಟೋ ಸಾರಿ ತಂದಿದ್ದೇನೆ.

ಅಧ್ಯಕ್ಷರು: ಕಾರ್ಡ್ ವಿತರಣೆ ಮಾಡುತ್ತೇವೆಂದು ಹೇಳಿದ್ದಾರಲ್ಲಾ, ದಯಮಾಡಿ ಸಹಕರಿಸಿ. ಈಗ ಮುಂದಿನ ಪ್ರಶ್ನೆಗೆ ಹೋಗೋಣ.

ಟಿ.ನರಸೀಪುರ ತಾಲ್ಲೂಕು ಮುಡುಕುತೊರೆ ಎರಡನೇ ಹಂತದ ತಲಕಾಡು ಹಾಗೂ ಮೇದನಿ ಏತ ನೀರಾವರಿ ಯೋಜನೆ

3 (196)

ಶ್ರೀ ಎಸ್.ಕೃಷ್ಣಪ್ಪ (ಬನ್ನೂರು): ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಟಿ.ನರಸೀಪುರ ತಾಲ್ಲೂಕು, ಮುಡುಕು ತೊರೆ ಎರಡನೆ ಹಂತದ ತಲಕಾಡು